1961 ರಿಂದ 1967ರ ವರೆಗೆ ಗ್ರಾಂಟು, ಸ್ಪೆಶಲ್ ಗ್ರಾಂಟು ಎಂತ ಹೇರಳ ಹಣ ಈ ಬೋರ್ಡಿಗೆ ಬಂದಿದೆಯಾಗಿಯೂ, ಆ ಹಣದಲ್ಲಿ ಖರ್ಚುಗಳು ಹೋಗ್ಗಾ ಬಾಕಿ ರೂಪಾಯಿ ಒಂದು ಲಕ್ಷ ನಲವತ್ತು ಸಾವಿರ ಕೈಯಲ್ಲಿ ಶಿಲ್ಕು ಇರಬೇಕಾಗಿತ್ತು. ಆದರೆ ಅಷ್ಟೆ ಶಿಲ್ಕು ಇದ್ದುದು ಬರೇ 6 ಸಾವಿರ ಚಿಲ್ಲರೆ ಮಾತ್ರ ಎಂದು ಕಂಡುಬರುತ್ತದೆ, ಬಾಕಿ ಹಣಗಳು ಏನಾಯಿತು ಎಂಬುದು ತಿಳಿಯಲಿಕ್ಕೆ ಅನಾಧ್ಯವಾಗಿ ಇನ್ನು ಮುಂದೆ ಯಾರಿಗೂ ಚೆಕ್‌ಗಳನ್ನು ಕೊಡಬಾರದೆಂದು ಜಿಲ್ಲಾಧಿಕಾರಿಗಳು ಆಜ್ಞೆ ಮಾಡಿ, ತಡೆಹಿಡಿದು ಹಾಗೆಯೇ ರಿಪೋರ್ಟ್‌ಗಳನ್ನು ಬರೆದುಕೊಂಡು ಹೋಗಿದ್ದಾರಂತೆ. ಈಗ ನೌಕರರಿಗೆ ಸಂಬಳ ವಗೈರೆ ಕೊಡಲು ಹಣವಿಲ್ಲವಂತೆ.

1-00 P.M.

ಇನ್ನು ಇತರ ಆಡಳಿತ ಸಂಸ್ಥೆಯಲ್ಲೂ ಒಂದಕ್ಕೊಂದು ಹೊಂದಿಕೆ ಇಲ್ಲ. ನಾಲ್ಕು ಜನ ಬೇಕಾಗುವಲ್ಲೆ ಹತ್ತು ಜನರಿರುತ್ತಾರೆ. ಕೆಲಸಕ್ಕಾಗಿ ಯಾವುದಾದರೂ ಒಂದು ಆಫೀಸಿಗೆ ಹೋದರೆ ಮೇಜಿನಿಂದ ಮೇಜಿಗೆ ತಿರುಗಿ ತಲೆಯಮೇಲೆ ಕೈ ಇಟ್ಟುಕೊಂಡು ಬರಬೇಕಾಗುತ್ತದೆ. ಕಾಗದ ಪತ್ರದ ಮೂಲಕ ತಿಳಿದುಕೊಳ್ಳುವ ಅಂದರೆ ವರ್ಷಾನುಗಟ್ಟಲೆ ಉತ್ತರವೇ ಬರುವುದಿಲ್ಲ. ಸರಿಯಾದ ರೀತಿಯಲ್ಲಿ ಆಡಳಿತೆ ನೋಡಲು ನಮ್ಮ ಈಗಿನ ಸರಕಾರಕ್ಕೆ ಬರುವುದಿಲ್ಲವಾಗಿ ಕಂಡುಬರುತ್ತದೆ. ಉದಾಹರಣೆಗೆ ಒಂದು ವಿಷಯ ಹೇಳುತ್ತೇನೆ. ಬರೇ 96 ರೂಪಾಯಿ ಸಂಬಳದ ಹೈಸ್ಕೂಲಿನ ಬಡ ಮಾಸ್ತರು 1957ರಲ್ಲಿ ನಿವೃತ್ತರಾದರು—ತನ್ನ ಪೆನ್‌ಷನ್ ಬಗ್ಗೆ ಅರ್ಜಿ ಮಾಡಿಕೊಂಡರು. 1963 ರಲ್ಲಿ ರಿಮೈಂಡರ್ ಕಳಿಸಿದರು—ಈವರೆಗೆ ಉತ್ತರವೂ ಇಲ್ಲ, ಪೆನ್‌ಷನ್ನೂ ಇಲ್ಲ. ನಿಯಮ ಹೀಗಿದೆ: "1956 ನೇ ನವೆಂಬರದಲ್ಲಿ ಮದ್ರಾಸು ರಾಜ್ಯದಿಂದ ಬೇರ್ಪಟ್ಟು ಮೈಸೂರಿಗೆ ಸೇರಿದ ದಕ್ಷಿಣ ಕನ್ನಡ ಜಿಲ್ಲೆಯ ಬೋರ್ಡುಶಾಲೆಗಳ ಉಪಾಧ್ಯಾಯರ ಪ್ರಾಯ 55ರ ನಂತರ ನಿವೃತ್ತಿಹೊಂದಿ ಪೆನ್‌ಷನ್ನಿಗೆ ಅರ್ಹರಾಗುವರು. ಅವರಲ್ಲ ಹಲವರು ಹಿಂದಿನ ಮದ್ರಾಸು ನಿಯಮಕ್ಕೆ ಸರಿಯಾಗಿ ಪ್ರಾಯ 60 ರ ತನಕ ಖಾಸಗಿ ಶಾಲೆಗಳಲ್ಲಿ ಕನಿಷ್ಠ ವೇತನದಲ್ಲಿ ನೇಮಕಹೊಂದಿದ್ದಾರೆ.

"ಪೆನ್‌ಷನ್ ಮತ್ತು ನಂತರದ ವೇತನ ಕೂಡಿ ನಿವೃತ್ತಿಯ ಮೊದಲಿನ ವೇತನಕ್ಕಿಂತಲೂ ಕಡಿಮೆಯಾಗಿದ್ದಲ್ಲ, ಪೂರ್ಣ ಪೆನ್‌ಷನ್, ಯಾ ಹಿಂದಿನ ವೇತನಕ್ಕೆ ಅಧಿಕವಾಗದಷ್ಟು ಪೆನ್‌ಷನ್ನನ್ನು ನಿವೃತ್ತಿಯ ನಂತರದ ಕನಿಷ್ಠ ವೇತನದೊಂದಿಗೆ ಕೊಡಬೇಕೆಂಬ ನಿಯಮವಿದೆ." ಆದರೆ ಮೇಲೆ ಹೇಳಿದ ಉಪಾಧ್ಯಾಯರಿಗೆ ಖಾಸಗಿ ಶಾಲೆಯುಲ್ಲಿ ನೇಮಕಗೊಂಡ 5 ವರ್ಷದ ಅವಧಿಯಲ್ಲಿ ಪೆನ್‌ಷನ್ ಕೊಡಲಾಗದಿರುವುದು ನಿಯಮಕ್ಕೂ ನ್ಯಾಯಕ್ಕೂ ವಿರೋಧ. ಈ ಬಾಬಿನಲ್ಲಿ ಮಂತ್ರಿಯವರೊಬ್ಬರನ್ನು ನೋಡಿದೆ, ಉತ್ತರವೇ ಇಲ್ಲ. ನಂತರ 13 ನೇ ತಾರೀಖಿನಲ್ಲಿ ಮತ್ತೊಬ್ಬರನ್ನು ಕಂಡು ಹೇಳಿಕೊಂಡೆ. ತಕ್ಕ ಕ್ರಮವನ್ನು ಕೈಕೊಳ್ಳಲಾಗುವುದೆಂತ ನನಗೆ ಉತ್ತರ ಬಂತು, ನಮ್ಮ ಬಡ ಮಾಸ್ತರ ಪುಣ್ಯವೆಂದು ಭಾವಿಸಿದೆ. ಹೀಗೆ ಹೇಳುತ್ತಾ ಹೋದರೆ ಅನೇಕ ವಿಷಯಗಳು ಸಿಕ್ಕುತ್ತದೆ. ಆದ್ದರಿಂದ ನಾನು ಹೇಳುತ್ತೇನೆ, ಎಲ್ಲಾ ಗ್ರಾಮಗಳಲ್ಲಿ ಪಂಚಾಯತಿಗಳು ಇರುವುವು. ಪಂಚಾಯತಿ ರಾಜ್ಯ ಮಾಡಬೇಕೆಂಬ ಸರಕಾರದ ಇಚ್ಛೆ ಇರುತ್ತದೆ. ಆದ್ದರಿಂದ ಪಂಚಾಯತಿಗಳಿಗೆ ಹೆಚ್ಚಿನ ಸವಲತ್ತನ್ನು ಕೊಟ್ಟು ಈಗಿರುವ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡನ್ನು ರದ್ದುಪಡಿಸಿ, ಜಿಲ್ಲಾ ಅಧಿಕಾರಿಯವರಿಗೆ ಸರ್ವತರದ ಅಧಿಕಾರವನ್ನು ಕೊಡಬೇಕೆಂತಲೂ, ಹಾಗೆ ಮಾಡಿದಲ್ಲಿ ಈ ಹೊಲನು ರಾಜಕೀಯವು ಕಡಮೆಯಾಗುವುದಲ್ಲದೆ, ಸರಕಾರಕ್ಕೂ ಬಹಳ ಉಳಿತಾಯವಾಗುತ್ತದೆ, ಆಡಳಿತೆಯೂ ಚೆನ್ನಾಗಿ ನಡೆಯುತ್ತದೆಂತ ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಸಭಾಪತಿಯವರಿಗೆ ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ELECTION OF MEMBERS TO THE SUBORDINATE LEGISLATION COMMITTEE

Results

MR. SPEAKER.—I have an announcement to make : It relate to lecton of Members to the Committee on Subordinate Legislation.

(Mr. SPEAKER)

As the number of nominaitons to the Committee on Subordinate Legislation is equal to the number of seats to be filled, the following members are declared elected to the Committee on Subordinate Legislation :—

Sriyuths :

1. L. Srikantiah
2. M. Nagappa
3. B. P. Gangadhar
4. C. M. Desai
5. S. Bhimanna
6. Siddiah Kashimath
7. S. H. Basanna
8. B. V. Magavi

Under sub-rule (3) of Rule 196 of the Rules of Procedure and Conduct of Business in the Mysore Legislative Assembly, I hereby nominate Sri C.M. Dasai as the Chairman of the Subordinate Legislation Committee.

I suppose the reply can begin at 5 P.M. and the Debate can go on till that hour. The Debate will go on from 3 P.M. to 5 P.M. in the afternoon and the reply begins at 5 P.M and we close by 7 P.M.

Member's Representation

Sri K. H. PATIL.—I had given notice of a Call Attention regarding the death of a person in police action at Gadag as also a short notice Question three days back.

Mr. SPEAKER.—The hon'ble Member will kindly come and meet me at Five Minutes to Three.

The House will now stand adjourned to meet again at 3-00 P.M.

The House adjourned at Five Minutes past One of the Clock and reassembled at Five Minutes post Three of the Clock.